ನಶ್ವರತೆಯ ದರ್ಶನವಾಯಿತು. ಎಷ್ಟೋ ದಿನಗಳ ನಂತರ ಊರವರಿಗೆ ವಿಷಯ ತಿಳಿದು ಗಿಡಮಣ್ಣ ಜಾಮೀನು ಕೊಟ್ಟು ಹಳದಣ್ಣನನ್ನು ಬಿಡಿಸಿಕೊಂಡು ಬಂದ. ಬರುವಾಗಲೇ ಅವನ ಗಿರಗಟ್ಲೆ ಜೊತೆಯ ಬಣ್ಣದ ಬಟ್ಟೆಯ ಚೀಲವನ್ನು ಹೊನ್ನಾಳಿ ಸೇತುವೆ ಮೇಲಿಂದ ಕೆಳಗಿನ ಹೊಳೆಗೆಸೆದು ಬಂದ ಗಿಡಮಣ್ಣ ತಾನೇ ಅವನಿಗೆ ಕೆಲಸಗಳ ಜೊತೆ ಎಲ್ಲಾ ತರಹದ ಆಶ್ರಯ ನೀಡಿದ. ನಡುವಯಸ್ಸಿನ ನೆಮ್ಮದಿಯ ಜೀವನದಲ್ಲಿ ಮಕ್ಕಳಿಲ್ಲದ ಕೊರಗು ಕಾಡುತ್ತಿತ್ತು.

ಊರ ಮಧ್ಯದ ಬರ್ಮಪ್ಪನ ಗುಡಿಯ ಬೃಹತ್ ಹುಣಸೇ ಮರವನ್ನು ಒಬ್ಬನೇ ಕಡಿಯಲು ಗಿಡಮಣ್ಣನ ಬಲವಂತದಿಂದ ಒಪ್ಪಿಕೊಳ್ಳುವಂತೆ ಹಳದಣ್ಣನಿಗೆ ಅವನ ನೆರವು ಕಟ್ಟಿಹಾಕಿತ್ತು. ವರ್ಷ ವರ್ಷವೂ ಊರಿಗೆ ದಾಳಿಯಿಡುತ್ತಿದ್ದ ಮಂಗಗಳು ಈ ಬಾರಿ ತಿಂಗಳುಗಟ್ಟಲೆ ಊರ ನಡುವಿನ ಹುಣಸೇ ಮರದಲ್ಲಿದ್ದು ಎಲ್ಲಾಕಡೆ ಚೆಲ್ಲಾಪಿಲ್ಲಿ ಮಾಡಿದ್ದರಿಂದ ಊರವರೆಲ್ಲಾ ಸೇರಿ ಮರ ಕಡಿಸಲು ತೀರ್ಮಾನಿಸಿದ್ದರು. ಆದರೆ ಬರ್ಮಪ್ಪನಿಗೆ ಹೆದರಿ ಕಡಿಯಲು ಯಾರು ಒಪ್ಪದಿದ್ದಾಗ ಹಲವಾರು ಕೆಲಸಗಳ ವಿದ್ಯೆಯನ್ನು ಮೈಗೂಡಿಸಿಕೊಂಡಿದ್ದ ಹಳದಣ್ಣನನ್ನು ಹಿಡಿದಿದ್ದರು. ಬಾವಿಯಲ್ಲಿ ಬೀಳುತ್ತಿದ್ದ ಕೊಡಗಳನ್ನು ಮುಳುಗೇಳಿ ತೆಗೆದಂತೆಯೇ ಕಾಡುಗಳಿಗೆ ನುಗ್ಗಿ ಮರಗಳನ್ನು ಕಡಿಯುವ ಕಲೆ ಇವನಿಗೆ ಸಿದ್ಧಿಸಿತ್ತು. ಪೊಲೀಸರಿಂದ ಬಿಡಿಸಿಕೊಂಡು ಬಂದನಂತರ ಹಳದಣ್ಣನ ಹಣೆಯಲ್ಲಿ ಸದಾಕಾಲ ಮೂರು ವಿಭೂತಿಕಟ್ಟುಗಳು ಪಳಪಳ ಹೊಳೆಯುತ್ತಿದ್ದವು. ಅದು ಕೆಲವರು ಹಳದಣ್ಣ ಸಿಮೆಂಟಿನಲ್ಲಿ ಮಾಡಿಸಿಕೊಂಡಿದ್ದಾನೆ ಎಂಬ ತಮಾಷೆವರೆಗೆ ನಿಂತಿತ್ತು. ಊರವರು 'ಗಿರಗಟ್ಲೆ ಇದಾನ...' ಎಂದು ಹಳದಕ್ಕಳನ್ನು ಕೇಳಿದಾಗ ಅವಳು 'ಯಾಕ್ರಪಾ... ನನಗಂಡಂಗೆ ಹೆಸರಿಲ್ವಾ?' ಎಂದು ಗದರಿಸುತ್ತಿದ್ದಳು. ಗಿರಗಟ್ಲೆ ಬಿಟ್ಟರೂ ಅವನಿಗೆ ಗಿರಗಟ್ಲೆ ಎನ್ನುವ ಅಡ್ಡಹೆಸರು ಬಿದ್ದಿತ್ತು.

ಬುಡದಿಂದ ಮೇಲೆ ನೋಡಿದರೆ ಆಕಾಶ–ಭೂಮಿ ಒಂದಾಗಿ ಬೆಳೆದು ನಿಂತಂತೆ ಕಾಣುವ ದಶದಿಕ್ಕಗಳಿಗೂ ಹರಡಿದ ಮರದ ಬುಡದ ಸಣ್ಣ ಗುಡಿಯೊಳಗೆ ಆಕಾರವಿಲ್ಲದ ಮೂರ್ನಾಲ್ಕು ಗುಂಡು ಕಲ್ಲುಗಳು ಪೂಜಿಸಿಕೊಂಡು ಸೃಷ್ಟಿಕರ್ತ ಬ್ರಹ್ಮನು 'ಭರಮಪ್ಪ... ಬರ್ಮಪ್ಪ...' ಎಂದು ಕರೆಸಿಕೊಳ್ಳುವ ದೇವರಿಗೆ ನಮಸ್ಕರಿಸಿ ಹಳದಣ್ಣ ಊರವರ ಸಮಕ್ಷಮದಲ್ಲಿ ಮರ ಏರಿದ. ಮೇಲೆ ಮೇಲೆ ಏರಿದಂತೆಲ್ಲಾ ಊರು ಕಾಣುತ್ತಾ ಕಾಣುತ್ತಾ ಸುತ್ತಲೂ ತೆರೆದುಕೊಳ್ಳುತ್ತಾ ಸಣ್ಣದಾಗಿ ಕಂಡುಬರಲುತೊಡಗಿತು. ರೆಂಬೆಕೊಂಬೆಗಳಿಂದ, ಹಕ್ಕಿಗುಬ್ಬಿಗಳಿಂದ ಮೇಲೇರಿ ಆಕಾಶವನ್ನೇ ಮುಟ್ಟಿದ ಅನುಭವವಾಗಿ ಕಣ್ಣು ಮುಚ್ಚಿದ. ಒಮ್ಮಲೆ ಪೊಲೀಸರ ಏಟು ತೋರಿಸಿದ ಶೂನ್ಯಭಾವ ಮೂಡಿ ಕಣ್ಣು ತೆರೆದು ದೊಡ್ಡ ಉಸಿರೆಳೆದು ಮರಕ್ಕೆ ಕೊಡಲಿ ಏಟು ಕೊಟ್ಟ.

ಮರದ ತುದಿಯಲ್ಲಿ ಕುಳಿತು ಕೊಡಲಿ–ಕಂದಲಿಗಳಿಂದ ಕಟ್... ಕಟ್... ರಪ್ ಎಂದು ಶಬ್ದ ಮಾಡುವುದು ಎಲ್ಲರಿಗೂ ಕೇಳಿ ಒಮ್ಮೆಯೆಲ್ಲಾ ಒಮ್ಮೆ ಹತ್ತಿರ ಬಂದು ಹಳದಣ್ಣನನ್ನು ಮಾತಾಡಿಸಿ ಹೋಗುತ್ತಿದ್ದರು. ಕೆಲವೊಮ್ಮೆ ಕಾಣುವ ಅವನು ಕೆಲವೊಮ್ಮೆ ರೆಂಬೆಗಳ ಸಂದಿಯಲ್ಲಿ ಕಾಣುತ್ತಿರಲಿಲ್ಲ. ಆಗಾಗ ಕುಳಿತು ಬೀಡಿ ಸೇದುವ ಅವನ ಬಳಿ ಕೆಲವರು 'ಗಿರಗಟ್ಲೆ... ಮೇಲಿಂದ ಬೀಡಿ ಎಸೆಯಲೇ...' ಎಂದು ಹರಟೆ ಹೋಗುತ್ತಿದ್ದರು. ಸುಧಾರಿಸಿಕೊಳ್ಳಲು ಕುಳಿತ ಅವನಿಗೆ ಸುತ್ತಲೂ ಕಾಣುವ ಜನರ ಕೆಲಸ ಕಾರ್ಯಗಳು ಮತ್ತು ಅವರವರು ಮಾಡಿಕೊಂಡ ಮನೆ... ಕೊಟ್ಟಿಗೆ... ಹೊಲ... ಕಣಗಳು ಎಲ್ಲವೂ ಕಾಣತೊಡಗಿತ್ತು. ತನಗೆ ತಿಳಿದ ಮತ್ತು ಅವರೊಂದಿಗೆ ಬದುಕುತ್ತಿರುವ ಅವನಿಗೆ ಒಮ್ಮಲೆ ಅವರೆಲ್ಲರ ದಿನಚರಿಯ ಬದುಕು ಕಾಣುತ್ತಾ ಕಾಣುತ್ತಾ ದಿನದಿಂದ ದಿನಕ್ಕೆ ಖಿನ್ನತೆಯ ಸುಸ್ತು ಆವರಿಸತೊಡಗಿತು.